ದಿ:13/08/2025
156ನೇ ಸಂ:330 = 25 + 44

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ .ಎನ್, ಶ್ರೀ ಕೆ.ಎಸ್. ನವೀನ್ ಮತ್ತು ಶ್ರೀ ಡಿ.ಎಸ್. ಅರುಣ್ ಇವರ ನಿಯಮ 330ರ ಸೂಚನಾ ಪತ್ರಕ್ಕೆ ಉತ್ತರ.

### ನಿಯಮ 330ರ ಮೇರೆಗೆ ಸೂಚನೆ:-

ಕಾರ್ಮಿಕ ಇಲಾಖಾ ವತಿಯಿಂದ 32 ಶಾಲೆಗಳಿಗೆ 750 ಕೋಟಿ ರೂ. ವೆಚ್ಚದಲ್ಲಿ ಕಾರ್ಮಿಕ ಮಕ್ಕಳಿಗಾಗಿ ಶಾಲೆಗಳನ್ನು ತೆರೆಯುತ್ತಿರುವುದು ಸದರಿ ಶಾಲೆಗಳು ಜಿಲ್ಲೆಯ ಯಾವುದೋ ಮೂಲೆಯಲ್ಲಿದ್ದು ಕೂಲಿ ಕಾರ್ಮಿಕರ ಸಣ್ಣ ಸಣ್ಣ ಮಕ್ಕಳು ಆ, ಜಿಲೆಯಲ್ಲಿ ತೆರೆಯಲಾಗಿರುವ ಕಾರ್ಮಿಕ ಶಾಲೆಗೆ ಪ್ರಯಾಣಿಸುವುದು ಅಸಾಧ್ಯ ಸಾಮಾನ್ಯವಾಗಿ ಕಾರ್ಮಿಕರು ಅಲೆಮಾರಿ ರೀತಿಯ ಜೀವನ ನಡೆಸುತ್ತಿದ್ದು ಅವರಿಗೆ ಅವರು ಇರುವಲ್ಲೇ ಹತ್ತಿರದ ಸರ್ಕಾರಿ ಶಾಲೆಗೆ ದಾಖಲು ಮಾಡಿಸಿಕೊಳ್ಳುವ ಕುರಿತು ಹಾಗೂ ಕಾರ್ಮಿಕ ಇಲಾಖಾ ವತಿಯಿಂದ 750 ಕೋಟಿ ವೆಚ್ಚದಲ್ಲಿ ಹೊಸದಾಗಿ ಶಾಲೆ ನಿರ್ಮಿಸುವುದಕ್ಕಿಂತ ರಾಜ್ಯದ ಮೂಲೆ ಮೂಲೆಗಳಲ್ಲಿರುವ ಶಿಕ್ಷಣ ಇಲಾಖೆಯಿಂದ ನಡೆಸಲ್ಪಡುತ್ತಿರುವ ಸರ್ಕಾರಿ ಶಾಲೆಗಳಿಗೆ ಈ ಅನುದಾನವನ್ನು ಹಂಚಿ ಅಲ್ಲೇ ಕಾರ್ಮಿಕ ಮಕ್ಕಳಿಗೂ ತರಗತಿ ನಡೆಸುವ ಮೂಲಕ ಕಾರ್ಮಿಕ ಇಲಾಖೆಯಲ್ಲಿರುವ ಬಡ ದಲಿತ ಹಿಂದುಳಿದ ಮಹಿಳಾ ಕಾರ್ಮಿಕರ ಉನ್ನತಿಗಾಗಿ ಇರುವ ಹಣದ ಸದ್ಬಳಕೆ ಕುರಿತು ಹಾಗೂ ಕಾರ್ಮಿಕ ಶಾಲೆಗೆ ವೆಚ್ಚ ಮಾಡುವ ಮೂಲಕ 750 ಕೋಟಿ ರೂಗಳ ಭ್ರಷ್ಟಾಚಾರ ತಡೆಗಟ್ಟುವ ನಿಟ್ಟಿನಲ್ಲಿ ಚರ್ಚಿಸಲು ಅನುಮತಿ ನೀಡುವಂತೆ ವಿನಂತಿಸುತ್ತೇನೆ.

### ಉತ್ತರ:-

ಕೇಂದ್ರ ಸರ್ಕಾರವು Model Welfare Scheme ರಲ್ಲಿ ಹೊರಡಿಸಿರುವ ಸುತ್ತೋಲೆ ಸಂಖ್ಯೆ: Z-20012/17/2020-BOCW, ದಿನಾಂಕ: 01-12-2023 ರನ್ವಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ರಾಜ್ಯದ 31 ಜಿಲ್ಲೆಗಳಲ್ಲಿ ಶ್ರಮಿಕ ವಸತಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಶಾಲೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳಲ್ಲಿ ವಾಸಮಾಡಲು ಅವಕಾಶ ನೀಡುವುದರಿಂದ ಅವರು ಶಾಲೆಗಳನ್ನು ತಲುಪಲು ಪ್ರಯಾಣ ಮಾಡುವ ಅಗತ್ಯ ಇರುವುದಿಲ್ಲ.

ರಾಜ್ಯ ಸರ್ಕಾರದ 2025-26ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಸರ್ಕಾರದ ಆದೇಶ ಸಂಖ್ಯೆ: ಕಾಇ 190 ಎಲ್ಇಟಿ 2025, ದಿನಾಂಕ:22/07/2025 ರಲ್ಲಿ 31 ಶಾಲೆಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಶಾಲೆಗಳ ಕಟ್ಟಡ ನಿರ್ಮಾಣ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಮುಂದುವರೆದು, ಈ 31 ಶಾಲೆಗಳನ್ನು ಸರ್ಕಾರದ ಕಾಯ್ದೆ ಮತ್ತು ನಿಯಮಗಳನ್ವಯ ಪಾರದರ್ಶಕವಾಗಿ ಯಾವುದೇ ಭ್ರಷ್ಟಾಚಾರಕ್ಕೆ ಅವಕಾಶ ಮಾಡದೇ ನಿರ್ಮಿಸಲಾಗುವುದು ಹಾಗೂ ಮಂಡಳಿಯ ಲೆಕ್ಕಪತ್ರಗಳನ್ನು ಮಹಾಲೇಖಪಾಲಕರ ಕಛೇರಿಯಿಂದ ಶಾಸನಾತ್ಮಕ ಲೆಕ್ಕ ಪರಿಶೋಧನೆಗೆ ಒಳಪಡಿಸಲಾಗುವುದು. ಮಂಡಳಿಯ ಸುಂಕ ನಿಧಿಯಿಂದ ಸರ್ಕಾರಿ ಶಾಲೆಗಳಿಗೆ ಅನುದಾನವನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

**ಕಾಇ 336 ಎಲ್ಇಟಿ 2025**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**